**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ.56/2013**

ಸಿ ಡಬ್ಲ್ಯೂ -23
ಪಿಡಬ್ಲ್ಯೂ -8

ಸಾಕ್ಷಿದಾರನ ಹೆಸರುಃ- ಪಿ.ಎನ್.ಶೇಷಾದ್ರಿ
ತಂದೆ ಹೆಸರು :- ಲೇಃನಿಂಗಪ್ಪ
ವಯಸ್ಸು :- 50 ವರ್ಷ
ಉದ್ಯೋಗ :- ಪಿಐ, ಗ್ರಾಮಾಂತರ ಠಾಣೆ
ವಾಸ :- ಚಾಮರಾಜನಗರ

**ಸಾಕ್ಷಿಗೆ ದಿಃ08.04.2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಕಲಂ 299ಅಡಿಯಲ್ಲಿ ಸಾಕ್ಷಿಯಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

**28.11.2012** ರಿಂದ 13.07.2013ರವರೆವಿಗೂ ನಾನು ಕುಣಿಗಲ್ ಠಾಣೆಯಲ್ಲಿ ಅಪರಾಧ ವಿಭಾಗದ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ08.02.2013 ರಂದು ಚಾ.ಸಾ.25ರವರು ಕಳವು ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಮಾಡಲು ನನಗೆ ಮತ್ತು ಸಿಬ್ಬಂದಿಯವರಾದ ಚಾ.ಸಾ.15 ರಿಂದ ಚಾ.ಸಾ.19 ಮತ್ತು ಚಾ.ಸಾ.21ರವರನ್ನು ನೇಮಕ ಮಾಡಿದ್ದು ಅದರಂತೆ ನಾನು ಅಪರಾಧ ಪ್ರಕರಗಳನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಕುಣಿಗಲ್ ನಗರದಲ್ಲಿ ಸಂತೇ ಬೀದಿ, ದೊಡ್ಡಪೇಟೆ,ತುಮಕೂರು ಮತ್ತು ಮದ್ದೂರು ರಸ್ತೆಗಳಲ್ಲಿ ಗಸ್ತು ಮಾಡಿಕೊಂಡು ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ಕುಣಿಗಲ್ ಟೌನ್ ಕೆನರಾ ಬ್ಯಾಂಕ್ ಹತ್ತಿರದ ಯಡಿಯೂರು ಬಸ್ ನಿಲ್ದಾಣದ ಕಡೆಗೆ ಗಸ್ತು ಮಾಡಲು ಬಂದಾಗ, ಯಡಿಯೂರು ಬಸ್ ನಿಲ್ದಾಣದಲ್ಲಿ ಒಬ್ಬ ಹೆಂಗಳು ಮತ್ತು ಲುಂಗಿ ಧರಿಸಿದ್ದ ಒಬ್ಬ ಗಂಡಸು ನಿಂತಿದ್ದು ಸದರಿ ಆಸಾವಿಗಳು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಮರೆಮಾಚಿಕೊಳ್ಳುತ್ತಿದ್ದಾರೆ ಎಂದು ನಾವು ಗಮನಿಸಿ ಅವರ ಬಳಿ ಹೋಗಿ ಅವರನ್ನು ಹಿಡಿದುಕೊಂಡು ವಿಚಾರ ಮಾಡಿದಾಗ ಹೆಂಗಸು ತನ್ನ ಹೆಸರು ಸರೋಜಮ್ಮ ಅಲಿಯಾಸ್ ಸರೋಜ ಎಂದು ಹಾಗೂ ಮತ್ತೊಬ್ಬ ಆಸಾಮಿ ರಾಮಪ್ಪ ಎಂದು ತೊದಲುತ್ತಾ ಚಿಕ್ಕಬೆನ್ನೂರು ಗ್ರಾಮ, ಸಂತೆ ಬೆನ್ನೂರ ಹೋಬಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಎಂಬುದಾಗಿ ವಾಸದ ಬಗ್ಗೆ ತಿಳಿಸಿದ್ದು ಸದರಿಯವರನ್ನು ಕುಣಿಗಲ್ ಗೆ ಬಂದಿರುವ ಬಗ್ಗೆ ವಿಚಾರಿಸಿದಾಗ ಅವರು ಸಂಮಂಜಸವಾದ ಉತ್ತರವನ್ನು ನೀಡದೇ ಇರುವ ಕಾರಣ ತಡವರಿಸುತ್ತಿದ್ದು ಹೆಂಗಸಿನ ಸೊಂಟದಲ್ಲಿ ಒಂದು ಬಟ್ಟೆಯ ಕೈ ಚೀಲ ಇದ್ದು ಅದರ ಬಗ್ಗೆ ವಿಚಾರಿಸಿ ಚಾ.ಸಾ.20ರವರ ಕಡೆಯಿಂದ ವಿಚಾರಸಿ ಪರಿಶೀಲಿಸಿದಾಗ ಆ ಕೈ ಚೀಲದಲ್ಲಿ ಎರಡು ಕಾಸಿನ ಸರವಿದ್ದು ಇದರ ಬಗ್ಗೆ ವಿಚಾರಿಸಿದಾಗ ಎರಡೂ ಸರಗಳು ನಕಲಿ ಸರವೆಂದು ಈ ಸರಗಳನ್ನು ತೋರಿಸಿ ಒಂಟಿ ಹೆಂಗಸರಿಂದ ಚಿನ್ನದ ವಡವೆಗಳನ್ನು ಕಳವು ಮಾಡಲು ಬಂದಿರುವುದಾಗಿ ತಿಳಿಸಿದ್ದು ಈ ದಿನ ಯಡಿಯೂರಿನಲ್ಲಿ ಸಂತೆ ಇದ್ದುದರಿಂದ ಸಂತೆಗೆ ಹೋಗಲು ನಿಂತಿದ್ದಾಗಿ ತಿಳಿಸಿದ್ದರಿಂದ ಸದರಿ ಆಸಾಮಿಗಳನ್ನು ವಶಕ್ಕೆ ಪಡೆದು ಮಧ್ಯಾಹ್ನ 3.00 ಗಂಟೆಗೆ ಸಿಪಿಐ ರವರ ಮುಂದೆ ಕಛೇರಿಯಲ್ಲಿ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ.4 ಎಂದು, ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಬಂದು ಆರೋಪಿತರ ವಿರುದ್ದ ಕುಣಿಗಲ್ ಠಾಣಾ

ಮೊ.ನಂ.44/2013, 48/2013, 49/2013 ಮತ್ತು 50/2013 ರಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿ:09.02.2013 ರಂದು ಚಾ.ಸಾ.25ರವರು ಆರೋಪಿಗಳ ಸ್ವಇಚ್ಚಾ ಹೇಳಿಕೆಗಳನ್ನು ಪಡೆದುಕೊಂಡ ಆಧಾರದ ಮೇರೆಗೆ ಅವರನ್ನು ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳದ ಮಹಜರ್ ಮಾಡಿಕೊಂಡು ಬರುವಂತೆ ಮೆಮೋ ನೀಡಿದ್ದು ಅದೇ ದಿನ ಹುಲಿಯೂರುದುರ್ಗ ಠಾಣಾ ಮೊ.ನಂ.128/2012ರ ಪ್ರಕರಣದಲ್ಲಿ ಆರೋಪಿಗಳು ಕೃತ್ಯ ಎಸಗಿಗಿರುವ ಜಾಗವನ್ನು ತೋರಿಸುವುದಾಗಿ ಸ್ವಇಚ್ಚಾ ಹೇಳಿಕೆಯನ್ನು ಹೇಳಿದ ಮೇರೆಗೆ ಸಿಬ್ಬಂದಿಯ ಬೆಂಗಾವಲಿನಲ್ಲಿ ಹುಲಿಯುರುದುರ್ಗ ಟೌನ್ ನ ಹಳೇವೂರು ರಸ್ತೆಯಲ್ಲಿ ಪಿಡಬ್ಲೂಡಿ ವಸತಿ ಗೃಹ ಮುಂಭಾಗ ಕತ್ತಿಕಾಯಿ ಮರದ ಬಳಿ ಆರೋಪಿಗಳು ಜಾಗವನ್ನು ತೋರಿಸಿ ಈ ಹಿಂದೆ ದಿ:30.06.2012 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಸದರಿ ರಸ್ತೆಯಲ್ಲಿ ಚಾ.ಸಾ.1ರವರು ಒಂಟಿಯಾಗಿ ನಡೆದುಕೊಂಡು ಹೋಗುತ್ತಿದ್ದು ಅವರನ್ನು ಹಿಂಬಾಲಿಸಿ ಆಕೆಗೆ ವಡವೆಗಳನ್ನು ಯಾರಾದರೂ ಕಳ್ಳತನ ಮಾಡಬಹುದು ಕರ್ಚಿಫ್ ನಲ್ಲಿ ಕಟ್ಟಿಕೊಳ್ಳಿ ಎಂದು ಅವರ ಗಮನವನ್ನು ತಪ್ಪಿಸಿ ವಡವೆಗಳನ್ನು ಕಟ್ಟಿಕೊಡುತ್ತೇನೆಂದು ನಂಬಿಸಿ ನಂತರ ಜನಗಳು ಓಡಾಡಲು ರಸ್ತೆಯ ಬಳಿ ಕರೆದುಕೊಂಡು ಹೋಗಿ ಅವರು ಮತ್ತು 2ನೇ ಆರೋಪಿ ಜಗಳ ಮಾಡುವ ಹಾಗೆ ನಾಟಕ ಮಾಡಿ ರೂ.70,000/- ಬೆಲೆ ಬಾಳುವ ಚಿನ್ನದ ವಡವೆಗಳನ್ನು ಕಳ್ಳತನ ಮಾಡಿದ ಬಗ್ಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಬಗ್ಗೆ ಚಾ.ಸಾ.2,7 ಮತ್ತು 8ರವರ ಸಮಕ್ಷಮ ಬೆಳಗ್ಗೆ 11.00 ರಿಂದ 12.00 ಗಂಟೆಯ ವರೆಗೆ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ.

ದಿ:21.02.2013ರಂದು ಚಾ.ಸಾ.25ರವರು ಆರೋಪಿಗಳ ಸ್ವಇಚ್ಚಾ ಹೇಳಿಕೆಗಳನ್ನು ಪಡೆದುಕೊಂಡ ಆಧಾರದ ಮೇರೆಗೆ ಅವರನ್ನು ಕರೆದುಕೊಂಡು ಹೋಗಿ ವಡವೆಗಳ ಅಮಾನತ್ತು ಪಂಚನಾಮೆಯನ್ನು ಮಾಡುವಂತೆ ಮೆಮೋ ನೀಡಿದ್ದು ಹುಲಿಯೂರುದುರ್ಗ ಠಾಣಾ ಮೊ.ನಂ.128/2012ರ ಪ್ರಕರಣದಲ್ಲಿ ಬೆಂಗಳೂರಿನ ರಾಜಾಮಾರ್ಕೆಟ್ ನ ವಡವೆ ಅಂಗಡಿಗೆ ಮಾರಾಟ ಮಾಡಿದ ವಸ್ತುಗಳನ್ನು ಆರೋಪಿತರು ತೋರಿಸುವುದಾಗಿ ಹೇಳಿದ್ದು ನಂತರ ಅವರೊಂದಿಗೆ ಕೊಹಿನೂರು ಜುವೆಲ್ಲರ್ಸ್ ಮಾರ್ಟ್ ಅಂಗಡಿಗೆ ಮಧ್ಯಾಹ್ನ 2.00 ಗಂಟೆ ಭೇಟಿ ನೀಡಿ 2.00 ಗಂಟೆಯಿಂದ 3.30 ರವರಗೆ ಚಾ.ಸಾ.9 ರಿಂದ 11 ರವರ ಸಮಕ್ಷಮ ಅಂಗಡಿ ಮಾಲೀಕರಾದ ವೆಂಕಟೇಶ್ ಬಾಬು ಎಂಬುವವರು ಆರೋಪಿಗಳನ್ನು ಗುರುತಿಸಿ ವಡವೆಗಳನ್ನು ಆರೋಪಿಗಳು ಮಾರಿದ್ದ ಬಗ್ಗೆ ನುಡಿದಿದ್ದು ಒಂದು ಚಿನ್ನದ ಮಾಂಗಲ್ಯ ಚೈನ್ 22.490 ಗ್ರಾಂ, ಒಂದುಜೊತೆ ಚಿನ್ನದ ಓಲೆ 5.650 ಗ್ರಾಂ, ಒಂದು ಚಿನ್ನದ ಮಾಟಿ 3.510 ಗ್ರಾಂ ಹಾಜರುಪಡಿಸಿದ್ದು ಅವುಗಳನ್ನು ಪರೀಕ್ಷೆ ಮಾಡಿಸಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ಅದೇ ದಿನ ಆರೋಪಿಗಳು ಕುಣಿಗಲ್ ಠಾಣಾ ಮೊ.ನಂ.44/2013, 48/2013, 49/2013 ಮತ್ತು 50/2013,ರಲ್ಲಿ ಕಳ್ಳತನ ಮಾಡಿದ ಬಗ್ಗೆ ಬೆಂಗಳೂರಿನ ಯಲಹಂಕ ಬಸ್ ನಿಲ್ದಾಣದಲ್ಲಿ ಇರುವ ಸುರಾಣ ಬ್ಯಾಂಕರ್ಸ್ ಮತ್ತು ಹರಿಹಂತ್ ಬ್ಯಾಂಕರ್ಸ್ ಎಂಬ ಗಿರವಿ ಅಂಗಡಿಗಳನ್ನು ತೋರಿಸಿ ತಾವು ಮಾರಾಟ ಮಾಡಿದ ವಸ್ತುಗಳನ್ನು ತೋರಿಸುವುದಾಗಿ ಹೇಳಿದ್ದು ಅವರೊಂದಿಗೆ ಸದರಿ ಸ್ಥಳಕ್ಕೆ ಭೇಟಿ ನೀಡಿ ಸಂಜೆ 5.30 ರಿಂದ 7.30ರವರೆಗೆ ಚಾ.ಸಾ.12 ರಿಂದ ಚಾ.ಸಾ.14ರವರ ಸಮಕ್ಷಮ ಮಹಜರ್ ಮಾಡಿದ್ದು ಸದರಿ ಅಂಗಡಿಗಳ ಮಾಲೀಕರು ಆರೋಪಿಗಳನ್ನು ಗುರುತಿಸಿ ವಡವೆಗಳನ್ನು ಮಾರಾಟ ಮಾಡಿರುವ ಬಗ್ಗೆ ತಿಳಿಸಿದ್ದು 1) 24 ಗ್ರಾಂ ನ ಒಂದು ಚಿನ್ನದ ಸರ, 2) 6 ಗ್ರಾಂ ನ ಒಂದು ಜೊತೆ ಕೆಂಪು ಮತ್ತು ಬಿಳಿ ಹರಳಿನ ಓಲೆ, 3) 6 ಗ್ರಾಂ ನ ಚಿನ್ನದ ಒಂದು ವಂಕಿ ಉಂಗುರ, 4) ಎರಡು ಸಣ್ಣ ಚಿನ್ನದ ಗುಂಡುಗಳು ಒಂದು ಲಕ್ಷ್ಮೀದೇವರ ಚಿತ್ರವಿರುವ ಕಾಸು ಇರುವ 20 ಗ್ರಾಂನ ಒಂದು ಅಂಜಲಿ ಕಟಿಂಗ್ ನ ಚಿನ್ನದ ಮಾಂಗಲ್ಯ ಸರವನ್ನು

ಅಮಾನತ್ತುಪಡಿಸಿಕೊಂಡು ಅದನ್ನು ಪರೀಕ್ಷಿಸಿರುತ್ತೇನೆ. ವಶಪಡಿಸಿಕೊಂಡ ಎಲ್ಲಾ ಮಾಲುಗಳನ್ನು ಮತ್ತು ಆರೋಪಿಗಳನ್ನು ಸಿಬ್ಬಂದಿಗಳ ಬೆಂಗಾವಲಿನಲ್ಲಿ ಠಾಣೆಗೆ ಕರೆದುಕೊಂಡು ಬಂದು ಹಾಜರುಪಡಿಸಿರುತ್ತೇನೆ. ಸ್ಥಳ ಮಹಜರ್ ನ ಸಹಿ ನಿ.ಪಿ.1(ಬಿ), ಎರಡು ಅಮಾನತ್ತು ಪಂಚನಾಮೆಗಳನ್ನು ನಿ.ಪಿ.10 ಮತ್ತು ನಿ.ಪಿ.11 ಎಂದು, ಸಹಿಗಳನ್ನು ನಿ.ಪಿ.10(ಎ) ಮತ್ತು ನಿ.ಪಿ.11(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.